

ಅವರಿಗೆ ಮಹಿಳಾ ಪ್ರಧಾನ ಪಾತ್ರಗಳಲ್ಲಿ ನಟಿಸುವ ಹಂಬಲವೂ ಇದೆ.

‘ಚಿತ್ರರಂಗಕ್ಕೆ ಬರುವುದಕ್ಕೂ ಮೊದಲಿನಿಂದಲೂ ನನಗೆ ಮಹಿಳಾಪ್ರಧಾನ ಸಿನಿಮಾಗಳಲ್ಲಿ ವಿಶೇಷ ಆಕರ್ಷಣೆ ಇತ್ತು. ಅದೇ ರೀತಿಯ ಕಥೆಗಳನ್ನೂ ಯೋಚಿಸುತ್ತಿದ್ದೆ. ಹೀರೊಯಿನ್ ಹೀರೊ ಥರ ಕಾಣಿಸಬೇಕು. ಅಂಥ ಪಾತ್ರಗಳಲ್ಲಿ ನಾನು ನಟಿಸಬೇಕು ಎಂಬುದು ನನ್ನ ಆಸೆ’ ಎನ್ನುತ್ತಾರೆ ಅವರು.

ನಟನೆಯ ನಡುವಿನ ಬಿಡುವಿನಲ್ಲಿ ಡಾನ್ಸ್ ಕಲಿಯುವುದರಲ್ಲಿ ತೊಡಗುವ ಪ್ರಿಯಾಗೆ ಸಿನಿಮಾ ಕಥೆಗಳನ್ನು ಯೋಚಿಸುವ, ಪ್ರಾಸಪದ್ಯಗಳನ್ನು ಬರೆಯುವ ಹವ್ಯಾಸವೂ ಇದೆ. ‘ಬದುಕಿನಲ್ಲಿ ಹೀಗೆಯೇ ಸ್ಫೂರ್ತಿ ಸಿಗುತ್ತ ಹೋದರೆ ಮುಂದೊಂದು ದಿನ ನಾನು ಬರೆದ ಕಥೆಯನ್ನೇ ಸಿನಿಮಾ ಮಾಡಿದರೂ ಮಾಡಬಹುದು’ ಎಂದು ನಗುವ ಇವರು ಸದ್ಯಕ್ಕೆ ನಟನೆಯ ಜೊತೆಗೆ ಶಿಕ್ಷಣವನ್ನೂ ಬ್ಯಾಲೆನ್ಸ್ ಮಾಡುತ್ತಿದ್ದಾರೆ.

‘ಈಗ ನಾನು ಎಂ.ಸಿ.ಎ. ಮಾಡುತ್ತಿದ್ದೇನೆ. ನಟನೆ ಮತ್ತೆ ಶಿಕ್ಷಣ ಎರಡೂ ಬ್ಯಾಲೆನ್ಸ್ ಮಾಡುವುದು ನನಗೆ ಯಾವತ್ತೂ ಕಷ್ಟ ಅನಿಸಿಲ್ಲ. ಒಂದು ಪರೀಕ್ಷೆ ಬರೆದು, ಮುಂದಿನ ಪರೀಕ್ಷೆಯ ನಡುವಿನ ಎರಡು ದಿನದ ಗ್ಯಾಪ್‌ನಲ್ಲಿ ಶೂಟಿಂಗ್‌ಗೆ ಹೋಗಿಬಂದು ಮತ್ತೆ ಎಕ್ಸಾಮ್ ಬರೆದಿದ್ದೂ ಇದೆ. ನಾವು ಕಷ್ಟ ಅಂದುಕೊಂಡರೆ ಎಲ್ಲವೂ ಕಷ್ಟ. ಸುಲಭ ಅಂದುಕೊಂಡರೆ ಸುಲಭವಾಗುತ್ತದೆ’ ಎನ್ನುವ ಪ್ರಿಯಾ, ‘ಸಂದರ್ಭ ನನ್ನನ್ನು ಹೇಗೆ ನಡೆಸುತ್ತದೆಯೋ ಆ ದಿಕ್ಕಿನಲ್ಲಿ ಬದುಕನ್ನು ರೂಪಿಸಿಕೊಳ್ಳುವೆ’ ಎಂದು ಹೇಳುವಷ್ಟು ಪ್ರಾಕ್ಟಿಕಲ್ ಹುಡುಗಿಯೂ ಹೌದು. ■

# ರಾಣ ಬರ್ತಿದ್ದಾನೆ!



ಕೆಲ ವರ್ಷಗಳ ಹಿಂದೆ ‘ರಾಣ’ ಎಂಬ ಸಿನಿಮಾ ಸುದ್ದಿಯಾಗಿದ್ದು ನೆನಪಿರಬಹುದು. ಹರ್ಷ ನಿರ್ದೇಶನದ ಆ ಸಿನಿಮಾದಲ್ಲಿ ರಾಕಿಂಗ್ ಸ್ಟಾರ್ ಯಶ್ ನಾಯಕನಾಗಿ ನಟಿಸಬೇಕಿತ್ತು. ಆ ಸಿನಿಮಾ ಟೇಕಾಫ್ ಆಗಲೇ ಇಲ್ಲ. ನಂತರ ಆ ಶೀರ್ಷಿಕೆಯನ್ನು ಶ್ರೇಯಸ್ ಕೆ. ಮಂಜು ನಾಯಕನಾಗಿ ನಟಿಸುತ್ತಿರುವ ಸಿನಿಮಾಗೆ ಬಳಸಿಕೊಳ್ಳಲಾಯಿತು. ಆ ಸಿನಿಮಾದ ಬಿಡುಗಡೆಯ ದಿನಾಂಕ ಇತ್ತೀಚೆಗೆ ಘೋಷಣೆಯಾಗಿದೆ. ನವೆಂಬರ್ 11ಕ್ಕೆ ‘ರಾಣ’ ಚಿತ್ರಮಂದಿರಗಳಲ್ಲಿ ರಾರಾಜಿಸಲಿದ್ದಾನೆ.

ನಂದಕಿಶೋರ್ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾವನ್ನು ಗುಜ್ಜಲ್ ಪುರುಷೋತ್ತಮ್ ನಿರ್ಮಿಸಿದ್ದಾರೆ. ರೀಷ್ಮಾ ನಾಣಯ್ಯ ಈ ಚಿತ್ರದ ನಾಯಕಿ. ರಜನಿ ಭಾರದ್ವಾಜ್, ಅಶೋಕ್, ಗಿರಿ, ಕಾಮಿಡಿ ಕಿಲಾಡಿಗಳು ಖ್ಯಾತಿಯ ಪ್ರವೀಣ್ ಕುಮಾರ್, ನಯನಾ, ರಘು, ಮೋಹನ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸಿನಿಮಾಕ್ಕೆ ರವಿವರ್ಮ, ಚೇತನ್, ಡಿಸೋಜ ಡಿಫರೆಂಟ್ ಡ್ಯಾನಿ ಹಾಗೂ ಗಣೇಶ್ ಸಾಹಸ ಸಂಯೋಜನೆ ಮಾಡಿದ್ದಾರೆ. ಚಂದನ್ ಶೆಟ್ಟಿ ಸಂಗೀತ ನಿರ್ದೇಶನ, ಶೇಖರ್ ಚಂದ್ರ ಛಾಯಾಗ್ರಹಣ ಚಿತ್ರಕ್ಕಿದೆ. ■

# ಬಾನ ದಾರಿಯಲ್ಲಿ ಗಣೇಶ್–ರುಕ್ಮಿಣಿ



ಗಣೇಶ್ ಈಗ ಗೆಲುವಿನ ಅಲೆಯಲ್ಲಿ ತೇಲುತ್ತಿದ್ದಾರೆ. ‘ಗಾಳಿಪಟ 2’ ಸಿನಿಮಾಕ್ಕೆ ದೊರೆತ ಸ್ಪಂದನ ಅವರ ಮುಖದಲ್ಲಿ ನಗುವನ್ನು ಹಿಗ್ಗಿಸಿದೆ. ಆ ಗೆಲುವಿನ ನಗುವನ್ನು ಮುಂದಿನ ಸಿನಿಮಾಗಳಲ್ಲಿಯೂ ಇರಿಸಿಕೊಳ್ಳುವ ವಿಶ್ವಾಸವೂ ಅವರಲ್ಲಿದೆ. ಆ ವಿಶ್ವಾಸದಲ್ಲಿಯೇ ಅವರು ‘ಬಾನ ದಾರಿಯಲ್ಲಿ’ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದಾರೆ. ಈ ಸಿನಿಮಾದ ಮೇಲೆ ಅವರಿಗೆ ನಿರೀಕ್ಷೆ ಇರಲು ಗಟ್ಟಿಯಾದ ಕಾರಣಗಳಂತೂ ಇವೆ. ಪ್ರೀತಂ ಗುಬ್ಬಿ ನಿರ್ದೇಶಿಸುತ್ತಿರುವ ಈ ಸಿನಿಮಾ ಆರಂಭದಿಂದಲೇ ಸಾಕಷ್ಟು ಸದ್ದು ಮಾಡುತ್ತಿದೆ. ಈ ಸಿನಿಮಾದಲ್ಲಿ ಗಣೇಶ್ ಕ್ರಿಕೆಟ್ ಆಟಗಾರನಾಗಿ ಕಾಣಿಸಿಕೊಳ್ಳುತ್ತಿದ್ದಾರಂತೆ. ಅವರ ಜೊತೆ ತೆರೆಯನ್ನು ಹಂಚಿಕೊಳ್ಳುತ್ತಿರುವ ರುಕ್ಮಿಣಿ ವಸಂತ್ ಈಜುಗಾರ್ತಿಯಾಗಿ ನಟಿಸುತ್ತಿದ್ದಾರೆ.

ಹೇಮಂತ್ ನಿರ್ದೇಶನದ ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾದ ಮೂಲಕ ಪರಿಚಿತರಾಗಿದ್ದ ರುಕ್ಮಿಣಿ ‘ಬಾನ ದಾರಿಯಲ್ಲಿ’ ಗಣೇಶ್ ಜೊತೆಗೆ ಮಿಂಚಲು ಸಜ್ಜಾಗಿದ್ದಾರೆ. ಈಗಾಗಲೇ ಎರಡನೇ ಹಂತದ ಚಿತ್ರೀಕರಣ ಮುಗಿದಿದ್ದು ಮುಂದಿನ ಚಿತ್ರೀಕರಣಕ್ಕಾಗಿ ಆಫ್ರಿಕಾಗೆ ಹೋಗಲು ಚಿತ್ರತಂಡ ಸಜ್ಜುಗೊಳ್ಳುತ್ತಿದೆ. ಈಜುಗಾರ್ತಿಯಾಗಿ ಕಾಣಿಸಿಕೊಳ್ಳುತ್ತಿರುವ ಈ ಸಿನಿಮಾ ತಮ್ಮ ವೃತ್ತಿಬದುಕಿಗೆ ದೊಡ್ಡ ಜಿಗಿತ ಕೊಡುತ್ತದೆ ಎಂಬ ವಿಶ್ವಾಸ ರುಕ್ಮಿಣಿ ಅವರದ್ದು. ರೀಷ್ಮಾ ನಾಣಯ್ಯ ಕೂಡ ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ■